# ಹಂಪಿ ಟೈಮ್ಸ್

## HAMPI TIMES

ಕನ್ನಡ ದಿನಪತ್ರಿಕೆ
KANNADA DAILY


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038


ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201


ಸಂಪುಟ:02 • ಸಂಚಿಕೆ: 43 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 09.08.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 43 • PRGI No:KARKAN/2023/88055 • VIJAYANAGARA • 09.08.2024 • Friday • Page:04 • Rs:2



# ಕೈಲಾಶ್ ಪರ್ಬತ್

ಚಾಟ್ಸ್ - ಡೈನಿಂಗ್

ಇಂಡಿಯಾ | ಸಿಂಗಾಪುರ | ಹಾಂಗ್‌ಕಾಂಗ್ | ಯುಎಸ್‌ಎ | ಕೆನಡಾ | ಕತಾರ್ | ಸೌದಿ ಅರೇಬಿಯಾ |ನೇದರ್‌ಲ್ಯಾಂಡ್ | ಸ್ವಿಜರ್‌ಲ್ಯಾಂಡ್ | ಜರ್ಮನಿ

# ಹೋಟೆಲ್ ಲೋಕಾರ್ಪಣೆ




we are
open
everyday

11-00 AM to 11-00 PM - 365 days

WELCOME




# ಶ್ರೀ ಸಾಯಿಬಾಬಾ ದೇವಸ್ಥಾನ ರಸ್ತೆ, ಟಯೋಟಾ ಶೋ ರೂಂ ಹತ್ತಿರ,
ಹೊಸಪೇಟೆ - ವಿಜಯನಗರ ಜಿಲ್ಲೆ

SINCE 1952

KAILASH PARBAT
CHAATS | DINING


















## ವಿಜ್ಞಾನ

# ನೀರಿನ ಮೇಲ್ಮೈಯಲ್ಲಿ ಮಂಜುಗಡ್ಡೆ ಏಕೆ ರೂಪುಗೊಳ್ಳುತ್ತದೆ?

■ ಆರ್.ಬಿ.ಗುರುಬಸವರಾಜ

ಸಮುದ್ರದನೀರಿನಮೇಲ್ಮೈಮೇಲೆಮಂಜುಗಡ್ಡೆರೂಪುಗೊಂಡಿರುವುದನ್ನು ನೀವು ನೋಡಿರಬಹುದು. ನೀರಿನ ಮೇಲ್ಮೈ ಮೇಲೆ ಮಂಜುಗಡ್ಡೆ ಏಕೆ ರೂಪುಗೊಳ್ಳುತ್ತದೆ? ಎಂಬ ಪ್ರಶ್ನೆ ಬರುವುದು ಸಹಜ. 'ಸಾಂದ್ರತೆಯ ಅಸಂಗತತೆ' ಎಂದು ಕರೆಯಲ್ಪಡುವ ನೀರಿನ ಭೌತಿಕ ಗುಣಲಕ್ಷಣದಿಂದಾಗಿ ನೀರಿನ ಮೇಲ್ಮೈಯಲ್ಲಿ ಮಂಜುಗಡ್ಡೆ ರೂಪುಗೊಳ್ಳುತ್ತದೆ. ಇತರ ಪದಾರ್ಥಗಳಿಗಿಂತ ಭಿನ್ನವಾಗಿ ನೀರಿನ ಸಾಂದ್ರತೆಯು ಘನೀಕೃತವಾದಾಗ ಕಡಿಮೆಯಾಗುತ್ತದೆ. ಅಂದರೆ ಅದೇ ಪ್ರಮಾಣದ ನೀರು ದ್ರವದ ನೀರಿಗಿಂತ ಮಂಜುಗಡ್ಡೆಯಾಗಿ ಹೆಚ್ಚು ಜಾಗವನ್ನು ತೆಗೆದುಕೊಳ್ಳುತ್ತದೆ. ನೀರು ಎರಡು ಹೈಡ್ರೋಜನ್ ಪರಮಾಣುಗಳು ಮತ್ತು ಒಂದು ಆಮ್ಲಜನಕ ಪರಮಾಣುವಿನಿಂದ ಮಾಡಲ್ಪಟ್ಟಿದೆ ಮತ್ತು ಈ ಅಣುಗಳು ಧ್ರುವೀಯವಾಗಿವೆ. ಅಂದರೆ ಅವುಗಳು ಒಂದು ತುದಿಯಲ್ಲಿ ಧನಾತ್ಮಕ ಆವೇಶ ಮತ್ತು ಇನ್ನೊಂದು ಋಣಾತ್ಮಕ ಆವೇಶವನ್ನು ಹೊಂದಿರುತ್ತವೆ. 0 ಲಿ ಅ (32 ಲಿ ಈ) ತಾಪಮಾನದಲ್ಲಿ ತಣ್ಣಗಾದಾಗ ನೀರಿನ ಅಣುಗಳು



ಒಟ್ಟಿಗೆ ಹತ್ತಿರವಾಗುತ್ತವೆ. ಆಗ ತಂಪಾದ ನೀರಿನ ಅಣುಗಳು ನಿಧಾನವಾಗಿ ಚಲಿಸಲು ಪ್ರಾರಂಭಿಸುತ್ತವೆ ಮತ್ತು ಅವು ಪರಸ್ಪರ ಹೆಚ್ಚು ಆಕರ್ಷಣೆಗೊಳಗಾಗಿ ಬಂಧಗಳನ್ನು ರೂಪಿಸುತ್ತವೆ. ತಾಪಮಾನವು ಕಡಿಮೆಯಾಗುತ್ತಾ ಹೋದಂತೆ ನೀರಿನ ಅಣುಗಳ ನಡುವಿನ ಹೈಡ್ರೋಜನ್ ಬಂಧಗಳು ಬಲಗೊಳ್ಳುತ್ತವೆ. ಇದರಿಂದಾಗಿ ಅಣುಗಳು ಸ್ಫಟಿಕದಂತಹ ರಚನೆಯಲ್ಲಿ ಜೋಡಿಸಲ್ಪಡುತ್ತವೆ. ಈ ಪ್ರಕ್ರಿಯೆಯು ಮಂಜುಗಡ್ಡೆಯೊಳಗೆ ಗಾಳಿ ಚೀಲಗಳನ್ನು ಸೃಷ್ಟಿಸುತ್ತದೆ. ಇದು ದ್ರವ ನೀರಿಗಿಂತ ಕಡಿಮೆ ಸಾಂದ್ರತೆಯನ್ನು ಉಂಟುಮಾಡುತ್ತದೆ. ನೀರಿನ ಮೇಲ್ಮೈಯು ಹೆಪ್ಪುಗಟ್ಟುವಷ್ಟು ತಣ್ಣಗಾದಾಗ, ರೂಪುಗೊಳ್ಳುವ ಮಂಜುಗಡ್ಡೆಯು ಅದರ ಕೆಳಗಿರುವ ನೀರಿಗಿಂತ ಕಡಿಮೆ ಸಾಂದ್ರತೆ ಹೊಂದಿರುತ್ತದೆ. ಇದರಿಂದಾಗಿ ಮಂಜುಗಡ್ಡೆಯು ಕೆಳಭಾಗಕ್ಕೆ ಮುಳುಗುವ ಬದಲು ನೀರಿನ ಮೇಲೆ ತೇಲುತ್ತದೆ. ನೀರಿನ ಮೇಲ್ಮೈಯಲ್ಲಿ ರೂಪುಗೊಳ್ಳುವ ಮಂಜುಗಡ್ಡೆಯ ಪದರವು ಕೆಳಗಿರುವ ನೀರನ್ನು ನಿರೋಧಿಸಲು ಸಹಾಯ ಮಾಡುತ್ತದೆ. ಇದು ತಂಪಾಗುವ ದರವನ್ನು ನಿಧಾನಗೊಳಿಸಲು ಸಹಾಯ ಮಾಡುತ್ತದೆ.

ಚಳಿಗಾಲದಲ್ಲಿ ನಡೆಯುವ ಈ ವಿದ್ಯಮಾನವು ಅನೇಕ ಜಲಚರಗಳ ಉಳಿವಿಗಾಗಿ ಮುಖ್ಯವಾಗಿದೆ. ಏಕೆಂದರೆ ಇದು ಮಂಜುಗಡ್ಡೆಯ ಕೆಳಗಿನ ನೀರಿನಲ್ಲಿ ಜೀವಿಗಳು ವಾಸಿಸಲು ಅನುವು ಮಾಡಿಕೊಡುತ್ತದೆ. ಮಂಜುಗಡ್ಡೆ ರೂಪುಗೊಳ್ಳದಿದ್ದರೆ ಚಳಿಗೆ ಕೆಲ ಜಲಚರಗಳು ಸಾಯುತ್ತವೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

### ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಬುಕ್ಕಸಾಗರದ

# ಏಳುಹೆಡೆ ನಾಗಪ್ಪ ವಿಶೇಷ ಆಚರಣೆ

ನಾಡಿಗೆ ದೊಡ್ಡ ಹಬ್ಬ ನಾಗರ ಪಂಚಮಿ ಬುಕ್ಕಸಾಗರದ ಏಳುಹೆಡೆ ನಾಗಪ್ಪ ವಿಶೇಷ ಆಚರಣೆ

**ನಾಗರ ಪಂಚಮಿ ನಾಡಿಗೆ ದೊಡ್ಡದು**
**ನಾಡ ನಾರಿಯರು ಕೂಡೋಣ**
**ಎಲೆ ಗೆಳತಿ ನಾಗಪ್ಪಗೆ ಹಾಲು ಎರಿಯೋಣ,**
**ನಾಗರ ಪಂಚಮಿ ನಾಡ ಹೆಣ್ಣಿಗೆ ಹಬ್ಬ**
**ನಾಗಪ್ಪಗಾಲು ಎರಿಯೋಣ ನನ ಗೆಳತಿ**
**ನಾಗರ ಹೆಡಿಹಾಂಗ ಆಡೋಣ**
**ಆಳ್ಳಿಟ್ಟು ತಂಬಿಟ್ಟು ಮಾಡಿಟ್ಟು ಎಳ್ಳುಂಡೆ**
**ದಳ್ಳುರಿ ಕಣ್ಣು ಹೆಣೆಯಾನ ಕೋರಳಾನ**
**ನಾಗರ ನಿನ್ ಗೆಡೆಯೋ ಕೈಮುಗಿದು....**


ಹೌದು ನಾಗರ ಪಂಚಮಿ ನಾಡಿಗೆ ದೊಡ್ಡ ಹಬ್ಬ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಬಹುದೊಡ್ಡ ಆಚರಣೆ ನಾಗರ ಪಂಚಮಿ. ಶ್ರಾವಣ ಮಾಸ ಪ್ರಾರಂಭಗೊಂಡರೆ ಸಾಲು ಸಾಲು ಹಬ್ಬಗಳ ಆಚರಣೆ, ವ್ರತಗಳು ಮಾಸ ಪೂರ್ತಿ ನಡೆಯುತ್ತವೆ. ಈ ಮಾಸದಲ್ಲಿ ನಾಗರ ಪಂಚಮಿ ಅತ್ಯಂತ ಭಕ್ತಿ ಸಡಗರದ ಆಚರಣೆಯ ಹಬ್ಬ. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಈ ಹಬ್ಬ ಉತ್ಸಾಹ, ಬದುಕಿನ ಭರವಸೆಯನ್ನು ತಂದುಕೊಡುತ್ತದೆ. ಮದುವೆಯಾದ ಮೊದಲ ವರ್ಷದ ಶ್ರಾವಣ ಮಾಸ ಹೆಣ್ಣು ಮಕ್ಕಳಿಗೆ ಅತ್ಯಂತ ಮಹತ್ವದ್ದು. ಏಕೆಂದರೆ ಗಂಡನ ಮನೆಯಿಂದ ತವರಿಗೆ ಬಂದು ತವರಿನಲ್ಲಿ ಆಚರಿಸುವ ಹಬ್ಬವಿದು. ಮಗಳು ತವರು ಮನೆಗೆ ಬಂದಾಗ ತಂದೆ ತಾಯಿ ಅಣ್ಣ ತಂಗಿ ಹೀಗೆ ಕುಟುಂಬದಲ್ಲಿ ಸಂಭ್ರಮ. ತವರಿಗೆ ಬಂದ ಮಗಳಿಂದ ಅನೇಕ ಪೂಜೆ ವ್ರತಗಳನ್ನು ಮಾಡಿಸುತ್ತಾರೆ. ಮಂಗಳಗೌರಿ ವ್ರತ, ವರಮಹಾಲಕ್ಷ್ಮಿ, ರಕ್ಷಾಬಂಧನ ಗಣೇಶ ಚತುರ್ಥಿ, ಕೃಷ್ಣ ಜನ್ಮಾಷ್ಟಮಿ ಹೀಗೆಅನೇಕವ್ರತಾಚರಣೆಗಳು ಈ ಮಾಸದಲ್ಲಿ ನಡೆಯುತ್ತವೆ. ಹೀಗೆ ಪ್ರತಿ ಊರು, ಮನೆ ಮನೆಗಳಲ್ಲಿ ಸಾಲು ಸಾಲು ಹಬ್ಬಗಳ ಸಂಭ್ರಮ ನೆರವೇರುತ್ತವೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಈ ಹಬ್ಬಗಳಿಗೆ ಮುಕುಟಪ್ರಾಯವಾಗಿ ನಾಗ ಪಂಚಮಿ ಹಬ್ಬ. ಶುಕ್ಲ ಪಕ್ಷದ ಪಂಚಮಿ ದಿನ ನಾಗರ ಪಂಚಮಿಯ ಹಬ್ಬದ ಆಚರಣೆ. ಇಡೀ ರಾಜ್ಯದ ತುಂಬೆಲ್ಲ ಪೂಜೆ, ಆರಾಧನೆಗಳು ನಡೆಯುತ್ತೆವೆ. ಅದೇ ರೀತಿ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಹಾಗೂ ವಿಶೇಷವಾಗಿ ಹಂಪಿಯ ಈ ಪ್ರದೇಶದಲ್ಲಿ ನಾಗರ ಪಂಚಮಿಯ ಆರಾಧನೆ ಪೂಜೆ ಪೌರಾಣಿಕವಾಗಿ, ಧಾರ್ಮಿಕವಾಗಿ ನಡೆಯುತ್ತಾ ಬಂದಿವೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಲವಾರು ಕಡೆ ನಾಗಬನಗಳು ನಿರ್ಮಾಣ ಗೊಂಡಿವೆ. ಶ್ರೀಕೃಷ್ಣದೇವರಾಯ ಸಾಮ್ರಾಜ್ಯದ ಆಡಳಿತದ ಸಂದರ್ಭದಲ್ಲಿ ಬುಕ್ಕಸಾಗರದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಏಳುಹೆಡೆಯ ನಾಗಪ್ಪ, ಕೃಷಿಕ ಸಮೂದಾಯದ ರಕ್ಷಣೆಯ ಮೂಲ ಉದ್ದೇಶದ ಜೊತೆಗೆ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯನ್ನು ಪಡೆದುಕೊಂಡು ಬಂದಿದೆ. ಕಳೆದ ಒಂದೆರೆಡು ದಶಕದಿಂದ ಈ ಏಳುಹೆಡೆ ನಾಗಪ್ಪನ ದೇವಸ್ಥಾನವು ಸ್ಥಳೀಯವಾಗಿ ಅಷ್ಟೇ ಅಲ್ಲದೆ ರಾಜ್ಯ, ಹೊರರಾಜ್ಯದಲ್ಲೂ ಪ್ರಸಿದ್ಧಿ ಪಡೆದುಕೊಂಡಿದೆ. ರಾಜ್ಯದ ವಿವಿಧ ಪ್ರದೇಶಗಳಿಂದ ಹಾಗೂ ಹೊರರಾಜ್ಯಗಳಿಂದಲೂ ಭಕ್ತರು ಈ ದೇವಸ್ಥಾನಕ್ಕೆ ಆಗಮಿಸಿ ಪೂಜೆ ಅಭಿಷೇಕ ಇತ್ಯಾದಿಗಳನ್ನು ನೆರವೇರಿಸಿ ತಮ್ಮ ಇಷ್ಟಾರ್ಥ ಸಿದ್ಧಿಗಳನ್ನು ನೆರವೇರಿಸಿಕೊಳ್ಳುತ್ತಿದ್ದಾರೆ.






### ಏಳುಹೆಡೆ ನಾಗಪ್ಪನ ಹಿನ್ನೆಲೆ

ನಾಗಾರಾಧನೆಯು ಆದಿಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ, ಸಿಂಧೂ ನಾಗರಿಕತೆಯಲ್ಲಿಯೂ ನಾಗಾರಾಧನೆ ಅವಶೇಷಗಳು ದೊರೆತಿವೆ ಹೀಗಾಗಿ ನಾಗರಾಧನೆಗೆ ಪ್ರಾಚೀನ ಚರಿತ್ರೆ ಇದೆ. ಶೈವ,ವೀರಶೈವ, ವೈಷ್ಣವ ಬೌದ್ಧ, ಜೈನರಲ್ಲಿಯೂ ಸಹ ನಾಗರಾಧನೆ ಪದ್ಧತಿಗಳು ನಡೆದುಕೊಂಡು ಬಂದಿವೆ. ಇದೇ ಪ್ರಕಾರ ನಮ್ಮ ನಾಡಿನಲ್ಲಿ ಹಾಗೂ ಹಂಪಿಯ ಪ್ರದೇಶದಲ್ಲಿಯೂ ನಾಗಾರಾಧನೆ ನಡೆದುಕೊಂಡು ಬಂದಿದೆ. ಬುಕ್ಕಸಾಗರದ ಏಳುಹೆಡಿ ನಾಗಪ್ಪನನ್ನು ಶ್ರೀ ವ್ಯಾಸ ತೀರ್ಥರು ಪ್ರತಿಷ್ಠಾಪಿಸಿದ್ದಾರೆ ಎಂಬ ಕಾರಣದಿಂದ ಇದಕ್ಕೆ ಅತ್ಯಂತ ಧಾರ್ಮಿಕ ಮಹತ್ವವಿದೆ. ಬುಕ್ಕಸಾಗರದ ನಾಗಪ್ಪ ಎಂದೇ ಪ್ರಸಿದ್ಧಿ ಪಡೆದಿರುವ ಏಳುಹೆಡೆ ನಾಗಪ್ಪ ಜನರ ಸಂಕಷ್ಟಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ಈಡೇರಿಸುವ ನಾಗದೇವರಾಗಿದ್ದಾನೆ. ಈ ಬುಕ್ಕಸಾಗರದ ಏಳು ಹೆಡೆ ನಾಗಪ್ಪನ ಪ್ರತಿಷ್ಠಾನದ ಹಿಂದೆ ಒಂದು ರೋಚಕವಾದ ಐತಿಹ್ಯವಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ ಪ್ರದೇಶದ ಪಕ್ಕದಲ್ಲಿ ಬುಕ್ಕಸಾಗರ, ರಾಮಸಾಗರ ಮೊದಲಾದ ಗ್ರಾಮಗಳಿದ್ದು ರೈತರು ಮಳೆಯನ್ನೇ ನಂಬಿ ಕೃಷಿ ಮಾಡುತ್ತಿದ್ದರು. ಹೊಸಪೇಟೆ ಸುತ್ತಲಿನ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ ದೊರೆಗಳು ನಿರ್ಮಿಸಿದ ಆಣೆಕಟ್ಟು, ಕೆರೆ ಕಾಲುವೆಗಳ ನಿರ್ಮಾಣದಿಂದಾಗಿ ನೀರಾವರಿ ಸೌಲಭ್ಯ ದೊರೆಯಿತು ಆದರೆ ಈ ಪ್ರದೇಶದ ಗ್ರಾಮಗಳಿಗೆ ನೀರಿನ ಸೌಲಭ್ಯ ದೊರೆಯುತ್ತಿರಲಿಲ್ಲ ಮಳೆಯನ್ನೇ ನಂಬಿ ಕೃಷಿಕರು ಕೃಷಿ ಮಾಡುತ್ತಿದ್ದರು. ಈ ಬರಡು ಪ್ರದೇಶಕ್ಕೆ ಶ್ರೀಕೃಷ್ಣದೇವರಾಯರು ನೀರಾವರಿ ಸೌಲಭ್ಯವನ್ನು ಕಲ್ಪಿಸುವಂತಹ ಯೋಚನೆಯಲ್ಲಿದ್ದರು, ಈ ಬಗ್ಗೆ ಪಂಪಾ ವಿರೂಪಾಕ್ಷನಲ್ಲಿ ಮೊರೆ ಹೋಗಿದ್ದರಂತೆ, ಹೀಗಿರುವಾಗ ಒಂದು ದಿನ ಕೃಷ್ಣದೇವರಾಯರ ಕನಸಿನಲ್ಲಿ ಆದಿಶೇಷನು ಬಂದು ಒಂದು ಕೆರೆಯ ಹಿಂಭಾಗದಿಂದ ಸರಸರನೆ ಹರಿಯುತ್ತಾ ಹೋಗಿ ಕೆಲ ಮೈಲುಗಳ ದೂರದಲ್ಲಿ ಆ ಹಾವು ಒಂದು ಬಂಡೆಯ ಮೇಲೆ ಕುಳಿತು ತನ್ನ ಹೆಡೆ ಬಿಚ್ಚಿ ಕುಕ್ಕಿದಂತೆ ಭಾಸವಾದ ಕನಸೊಂದು ಬಿದ್ದಿತ್ತಂತೆ, ಸ್ವಪ್ನದಲ್ಲಿ ಕಂಡ ಈ ಕನಸನ್ನು ಶ್ರೀ ಕೃಷ್ಣದೇವರಾಯರು ತಮ್ಮ ರಾಜ ಗುರುಗಳಾಗಿದ್ದ ವ್ಯಾಸ ತೀರ್ಥರ ಮುಂದೆ ಹೇಳಿದಾಗ, ಆ ಆದಿಶೇಷ ಹೆಡೆ ಬಿಚ್ಚಿ ನಿಂತ ಬಂಡೆಯ ಮೇಲೆ ನಾಗ ಪ್ರತಿಷ್ಠಾನ ಮಾಡಲು ಸಲಹೆ, ಮಾರ್ಗದರ್ಶನ ನೀಡಿದರಂತೆ.

ಶ್ರೀ ವ್ಯಾಸ ತೀರ್ಥರ ಮಾರ್ಗದರ್ಶನದ ಪ್ರಕಾರ ನಾಗ ಪ್ರತಿಷ್ಠಾವನವನ್ನು ಆ ಸ್ಥಳದಲ್ಲಿ ಮಾಡಿ ಒಂದು ದೇವಸ್ಥಾನವನ್ನು ಸಹ ನಿರ್ಮಿಸಲಾಯಿತು. ನೀರಾವರಿಗಾಗಿ ಕಾಲುವೆಯನ್ನು ಸಹ ನಿರ್ಮಿಸಿ ಇದರಿಂದ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಯಿತು. 1516ರಲ್ಲಿ ಈ ದೇವಸ್ಥಾನವನ್ನು ನಿರ್ಮಾಣ ಮಾಡಲಾಗಿದೆ ಎನ್ನಲಾಗಿದೆ. ಇದಕ್ಕೆ ಚಾರಿತ್ರಿಕ ದಾಖಲೆಗಳು ಲಭ್ಯವಿಲ್ಲದೆ ಇದ್ದರು, ಈ ಸ್ವಪ್ನದ ಕಥೆ ಅಥವಾ ಐತಿಹ್ಯವನ್ನು ಜನರು ನಂಬಿಕೊಂಡು ಬಂದಿದ್ದಾರೆ.

ನಾಡಿನ ವಿವಿಧ ಪ್ರದೇಶಗಳಲ್ಲಿ ನಾಗರ ಪಂಚಮಿಯನ್ನು ಅತ್ಯಂತ ಭಕ್ತಿ ಶ್ರದ್ಧೆ ಸಡಗರದಿಂದ ಆಚರಿಸಿಕೊಂಡು ಬರಲಾಗುತ್ತದೆ, ವಿಶೇಷವಾಗಿ ಕುಕ್ಕೆ ಸುಬ್ರಮಣ್ಯ, ಘಾಟಿ ಸುಬ್ರಮಣ್ಯ ಅಲ್ಲದೆ ಮಲೆನಾಡಿನ ಹಲವು ಪ್ರದೇಶಗಳಲ್ಲಿ ವಿಶೇಷವಾಗಿ ಉಡುಪಿ ಜಿಲ್ಲೆಯಲ್ಲಿ ನಾಗರಾಧನೆ ನಡೆಯುತ್ತದೆ. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಹೊರತುಪಡಿಸಿದರೆ ಅಷ್ಟೇ ಮಹತ್ವದ ನಾಗಾರಾಧನೆಯ ಕ್ಷೇತ್ರ ಹಂಪಿ ಪ್ರದೇಶದ ಬುಕ್ಕಸಾಗರದ್ದೆಂದು ಶಾಸ್ತ್ರ ಬಲ್ಲವರು ಹೇಳುತ್ತಾರೆ. ಹೀಗಾಗಿ ಈ ಏಳುಹೆಡೆಯ ನಾಗಪ್ಪನಿಗೆ ಕುಕ್ಕೆ ಸುಬ್ರಹ್ಮಣ್ಯದಷ್ಟೇ ಪ್ರಾಮುಖ್ಯತೆ, ಮಹತ್ವವಿದೆ ಎಂಬ ನಂಬಿಕೆಯಿಂದ ಭಕ್ತರು ತಮ್ಮ ಹತ್ತು ಹಲವು ನಾಗದೋಷಗಳ ನಿವಾರಣೆಗಾಗಿ ವಿಶೇಷ ಪೂಜೆ, ಅಭಿಷೇಕವನ್ನು ಮಾಡಿಸಿ ತಮ್ಮ ಸಂಕಷ್ಟಗಳನ್ನು ಪರಿಹರಿಸಿ ಕೊಂಡು ನಡೆದುಕೊಳ್ಳುತ್ತಿದ್ದಾರೆ.

ಹಂಪಿಯ ಹತ್ತು ಕೈಯಮ್ಮನ ಬಳಿ ನಾಗಬನವಿದೆ. ಈ ಪ್ರದೇಶ ಹಿಂದೆ ನಾಗಾರಾಧನೆಗೆ ಒಳಪಟ್ಟಿದೆ. ಬಾಳೆ ತೋಟದಲ್ಲಿರುವ ಈ ಬನದ ಹಲವಾರು ನಾಗಮೂರ್ತಿಗಳನ್ನು ನೋಡಿದಾಗ ಇಲ್ಲಿ ನಾಗರಾಧನೆಯು ಮಹತ್ವವನ್ನು ಪಡೆದುಕೊಂಡಿತ್ತು ಎಂಬುದನ್ನು ಗಮನಿಸಬಹುದಾಗಿದೆ. ಈ ನಾಗಬನಗಳು ಪವಿತ್ರವನ, ಗದ್ದೆಯ ಅಂಚು, ಹರಿಯುವ ನೀರಿನ ತೊರೆಗಳಲ್ಲಿ ನಿರ್ಮಾಣಗೊಂಡಿವೆ. ಇವು ಧಾರ್ಮಿಕವಾಗಿ ಅಷ್ಟೇ ಅಲ್ಲ, ಅಪೂರ್ವ ಜೀವ ಜಾಲದ ಕೊಂಡಿಯಾಗಿವೆ. ಈ ಬಾರಿಯ ನಾಗರ ಪಂಚಮಿ ಹಬ್ಬವನ್ನು ಜನರ ಅತ್ಯಂತ ಶ್ರದ್ಧೆ ಭಕ್ತಿ ಹಾಗೂ ಸಂಭ್ರಮದಿಂದ ಸಡಗರದಿಂದ ಆಚರಿಸಿ ನಾಗದೇವರ ಕೃಪೆಗೆ ಪಾತ್ರರಾಗಲಿ ಎಂದು ಆಶಿಸೋಣ. ನಾಗರ ಪಂಚಮಿಯನ್ನು ವೈಜ್ಞಾನಿಕವಾಗಿ ಆಚರಿಸಿ ಅಮೃತಕ್ಕೆ ಸಮನಾಗಿರುವ ಹಾಲನ್ನು ಹುತ್ತಗಳಿಗೆ, ಹಾಕಿ ವೇಸ್ಟ್ ಮಾಡದೆ ಅನಾಥರಿಗೆ, ಮಕ್ಕಳಿಗೆ ಕುಡಿಯಲು ಕೊಡುವುದರ ಮೂಲಕ ನಾಗಾರಾಧನೆ ಮಾಡಿ ಪುನೀತರಾಗೋಣ.



# ನಾಗರ ಪಂಚಮಿಯ ಕಥೆ

ಪಾಂಡವರಲ್ಲಿ ಒಬ್ಬರಾದ ಅರ್ಜುನನ ಮಗ ಅಭಿಮನ್ಯು ವಿನ ಪುತ್ರ ಪರೀಕ್ಷಿತ ಮಹಾರಾಜ. ಈ ಪರೀಕ್ಷಿತ ಮಹಾರಾಜನಿಗೆ ಜ್ಯೋತಿಷಿಗಳು ತಿಳಿಸಿದಂತೆ ರಕ್ಷಕ ಎಂಬ ಸರ್ಪವು ಕಚ್ಚಿ ಆತನ ಸಾವಾಯಿತು. ಇದರಿಂದ ದುಃಖಿಕ್ಕೀ ಡಾದ ಪರೀಕ್ಷಿತ ಮಹಾರಾಜನ ಪುತ್ರ ಜನಮೇಜಯ ಮಹಾರಾಜನು ಹಾವುಗಳನ್ನೇ ಸರ್ವ ನಾಶ ಮಾಡುವೆನೆಂದು ಪಣತೊಟ್ಟನು.

ಹಾವುಗಳನ್ನು ಸಂಪೂರ್ಣವಾಗಿ ನಾಶ ಮಾಡಲು ಆತನು ಸರ್ಪ ಯಜ್ಞ ಆರಂಭಿಸಿದನು. ಯಜ್ಞವನ್ನು ನೆರವೇರಿಸುತ್ತಿದ್ದ ಮುನಿಗಳು ನಾಗಗಳ ಹೆಸರನ್ನು ತೆಗೆದುಕೊಳ್ಳುತ್ತಿದ್ದಂತೆಯೇ ಎಲ್ಲಾ ಕಡೆಯಿಂದಲೂ ಸರ್ಪಗಳು ತಾನೇ ತಾನಾಗಿ ಆತನ ಯಜ್ಞ ಕುಂಡಕ್ಕೆ ಬಂದು ಆಹುತಿಯಾಗತೊಡಗಿದವು..

ತಪೋನಿರತನಾಗಿದ್ದ ಆಸ್ತಿಕ ಎಂಬ ಮುನಿವರನಿಗೆ ಆತನ ಶಿಷ್ಯರು ಈ ವಿಷಯವನ್ನು ಅರುಹಿದರು. ಹಾವುಗಳು ಮನುಷ್ಯನಿಗೆ ಶತ್ರುಗಳಲ್ಲ ನಿರುಪದ್ರವ ಜೀವಿಗಳು.. ಅವುಗಳ ಕುಲ ವಿನಾಶ ಮಾಡುವುದರಿಂದ ಸಾಕಷ್ಟು ಅನಾಹುತಗಳಾಗುತ್ತವೆ ಎಂಬುದನ್ನು ಮನಗಂಡ ಆಸ್ತಿಕ ಮುನಿಯ ಯಜ್ಞ ನಡೆಯುತ್ತಿರುವ ಸ್ಥಳಕ್ಕೆ ಧಾವಿಸಿ ಬಂದನು. ಮುನಿಗಳ ಮೇಲೆ ಅಪಾರ ಭಯ ಭಕ್ತಿಯನ್ನು ಹೊಂದಿದ್ದ ಜನಮೇಜಯ ಮಹಾರಾಜನು ಮುನಿಗಳಿಗೆ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper



ನಮಸ್ಕರಿಸಿ ಸೂಕ್ತ ಉಪಚಾರ ನೆರವೇರಿಸಿದನು. ನಂತರ ಮುನಿಗಳ ಆಗಮನದ ಕಾರಣವನ್ನು ಕೇಳಲು ಆಸ್ತಿಕ ಮುನಿಯ ಆತನಿಗೆ ಸರ್ಪಯಜ್ಞ ಮಾಡುವುದರಿಂದ ಉಂಟಾಗುವ ಅನಾಹುತಗಳನ್ನು ತಿಳಿ ಹೇಳಿ ಯಜ್ಞವನ್ನು ನಿಲ್ಲಿಸಲು ಕೇಳಿಕೊಂಡನು ಋಷಿ ಮುನಿಗಳ ಮೇಲೆ ಅಪಾರ ಗೌರವವನ್ನು ಹೊಂದಿದ್ದ ಜನಮೇಜಯರಾಜನು ಋಷಿಗಳ ಮಾತಿನಂತೆ ತನ್ನ ಯಜ್ಞವನ್ನು ನಿಲ್ಲಿಸಿದನು.

ಇನ್ನೂ ಹಲವಾರು ಸರ್ಪಗಳು ಯಜ್ಞದ ಉರಿಯಲ್ಲಿ ಬೆಂದು ಹೋಗುತ್ತಿದ್ದವು. ಆಗ ಆಸ್ತಿಕನು ಹಾವುಗಳನ್ನು ಯಜ್ಞಕುಂಡದಿಂದ ಹೊರತೆಗೆದು ಅವುಗಳ ಮೇಲೆ ಪನ್ನೀರಿನ ಮತ್ತು ಹಾಲಿನ ಸಿಂಚನ ಮಾಡಿದನು.ಗುರುವನ್ನು ಅನುಕರಿಸಿದ ಆತನ ಸಹಚರರು ಉಳಿದೆಲ್ಲ ಹಾವುಗಳ ತಾಪ ಶಮನ ಮಾಡಲು ಅವುಗಳ ಮೇಲೆ ತಮ್ಮ ಗುರುಗಳನ್ನು ಅನುಸರಿಸಿ ತೆಂಗಿನ ತಿಳಿನೀರು ಮತ್ತು ಹಾಲಿನ ಅಭಿಷೇಕ ಮಾಡಿದರು. ಆ ದಿನ ಶ್ರಾವಣ ಮಾಸದ ಪಂಚಮಿಯ ದಿನವಾಗಿತ್ತು. ಅಂದಿನಿಂದ ಪ್ರತಿ ವರ್ಷವೂ ನಾಗಗಳನ್ನು ರಕ್ಷಿಸುವ ಸಲುವಾಗಿ, ನಾಗ ಸಂತತಿಯು ಮನುಷ್ಯ ಕುಲಕ್ಕೆ ಮಾಡುವ ಉಪಕಾರ ಸ್ಮರಣೆಯ ದಿನವಾಗಿ ನಾಗರ ಪಂಚಮಿಯ ಹಬ್ಬವನ್ನು ಆಚರಿಸಲಾಗುತ್ತದೆ.

# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 43 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 09.08.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 43 • PRGI No:KARKAN/2023/88055 • VIJAYANAGARA • 09.08.2024 • Friday • Page:04 • Rs:2



ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
HAMPI TIMES VIJAYANAGARA
ಹಂಪಿ ಟೈಮ್ಸ್ ಇ-ಪೇಪರ್
94486 33038 | www.hampitimes.com / epaper.hampitimes.com | Vijayanagara | hampitimes@gmail.com


## ಮೈಕ್ರೋ ನ್ಯೂಸ್

### ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ; ಸಾಲ ಸೌಲಭ್ಯಕ್ಕಾಗಿ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಲು ಮತೀಯ ಅಲ್ಪಸಂಖ್ಯಾತರಿಂದ ಆನ್-ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಆಸಕ್ತರು ಆ.31 ರೊಳಗಾಗಿ ಆನ್‌ಲೈನ್ ವೆಬ್‌ಸೈಟ್ https://kmdconline.karnataka.gov.in/ ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

### ಆ. 13ರಿಂದ ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

**ಹಂಪಿ ಟೈಮ್ಸ್ ಹೊಸಪೇಟೆ**

ವಸತಿ, ವಕ್ಫ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಆಗಸ್ಟ್ ಮಾಹೆಯಲ್ಲಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಆಗಸ್ಟ್ 13 ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನಿಂದ ಮುಖ್ಯಮಂತ್ರಿಗಳೊಂದಿಗೆ ವಿಶೇಷ ವಿಮಾನದ ಮೂಲಕ ಹೊರಟು ಬೆಳಗ್ಗೆ 11 ಗಂಟೆಗೆ ಜಿಂದಾಲ್ ಏರ್‌ಸ್ಟ್ರಿಪ್‌ಗೆ ಆಗಮಿಸುವರು. ಅಲ್ಲಿಂದ ರಸ್ತೆ ಮೂಲಕ ನಿರ್ಗಮಿಸಿ ಹೊಸಪೇಟೆ ನಗರಕ್ಕೆ ಆಗಮಿಸಿ ಮಧ್ಯಾಹ್ನ 12.30ಕ್ಕೆ ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ ತುಂಗಭದ್ರ ಜಲಾಶಯಕ್ಕೆ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಆಗಸ್ಟ್ 14ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹೊಸಪೇಟೆಯ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯುವ ಮೊದಲನೇಯ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ನಂತರ ಸಂಜೆ 5 ರಿಂದ 6 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯುವ ಜಿಲ್ಲೆಯ ಅತಿವೃಷ್ಟಿ ಅನಾವೃಷ್ಟಿಯ ಕುರಿತು ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸುವರು. ಆಗಸ್ಟ್ 15ರಂದು ಬೆಳಿಗ್ಗೆ 8.45ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಕಾರ್ಯ ಕ್ರಮದಲ್ಲಿ ಭಾಗವಹಿಸುವರು. ನಂತರ ಬೆಳಿಗ್ಗೆ 10 ಗಂಟೆಗೆ ಹೊಸಪೇಟೆ ತಾಲೂಕಿನ ಕೊಂಡನಾಯಕನಹಳ್ಳಿಯಲ್ಲಿ ಪಕ್ಷದಿಂದ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

### ಅಂಜನಾದ್ರಿ ಬೆಟ್ಟಕ್ಕೆ ಸಾರಿಗೆ ವ್ಯವಸ್ಥೆ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರಾವಣ ಮಾಸದ ನಿಮಿತ್ತ ಸಾರ್ವಜನಿಕ ಪ್ರಯಾಣಿಕರ, ಭಕ್ತಾಧಿಗಳ ಅನುಕೂಲಕ್ಕಾಗಿ ಆಗಸ್ಟ್ 10 ರಿಂದ ವಿಶೇಷ ಬಸ್ ಸೇವೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಶನಿವಾರ ಮತ್ತು ರವಿವಾರದಂದು ಮುಂಜಾನೆ 8 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಹೊಸಪೇಟೆ ಕೇಂದ್ರ ಬಸ್ ನಿಲ್ದಾಣದಿಂದ-ಹುಲಿಗಿ-ಶಿವಪುರ ಸೋಮೇಶ್ವರ ದೇವಾಲಯ-ಆಂಜನಾದ್ರಿ ಬೆಟ್ಟಕ್ಕೆ ಬಸ್‌ಗಳನ್ನು ಬಿಡಲಾಗುತ್ತಿದೆ.

ಸಾರ್ವಜನಿಕ ಪ್ರಯಾಣಿಕರು, ಭಕ್ತಾಧಿಗಳು ಈ ಸಾರಿಗೆ ಸೌಕರ್ಯದ ಸದುಪಯೋಗ ಪಡೆದುಕೊಳ್ಳಿ ತಿಳಿಸಿದ್ದಾರೆ.

# ಅನ್ನದಾತನನ್ನ ಅಲೆದಾಡಿಸಬೇಡಿ

## ಶಾಸಕ ಹೆಚ್.ಆರ್.ಗವಿಯಪ್ಪ ಸಲಹೆ | 1.91 ಕೋಟಿ ರೂ.ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ

## ರೈತರು ಜನರ ಜೀವನಾಡಿ | ರೈತರಿಗೆ ಎಪಿಎಂಸಿ ಅಧಿಕಾರಿಗಳು ಸ್ಪಂದಿಸಿ | ಕಾಮಗಾರಿ ಕಳಪೆಯಾಗದಿರಲಿ

**ಹಂಪಿ ಟೈಮ್ಸ್ ಹೊಸಪೇಟೆ**

ಕೃಷಿಯನ್ನೆ ನಂಬಿರುವ ರೈತರ ನಮ್ಮೆಲ್ಲರ ಜೀವನಾಡಿಯಾಗಿದ್ದಾರೆ. ಮಾರುಕಟ್ಟೆಗೆ ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ 1.91 ಕೋಟಿ ರೂ ವೆಚ್ಚದಲ್ಲಿ ಎಪಿಎಂ ಪ್ರಾಂಗಾಣದಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಎಚ್.ಆರ್. ಗವಿಯಪ್ಪ ಹೇಳಿದರು.

ನಗರದ ಎಪಿಎಂಸಿ ಪ್ರಾಂಗಣದಲ್ಲಿ ಕೃಷಿ ಮಾರಾಟ ಇಲಾಖೆಯಿಂದ 2023-24ನೇ ಸಾಲಿನ ಆರ್‌ಐಡಿ ಎಫ್-29 ಯೋಜನೆಯಡಿ ಕಾಮಗಾರಿಗೆ ಗುರುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಹೊಸಪೇಟೆ ನಗರವು ಈ ಭಾಗದ ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಇನ್ನಷ್ಟು ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ರೈತರು ನಮ್ಮ ದೇಶದ ಬೆನ್ನೆಲುಬು ಆಗಿದ್ದಾರೆ. ಸಾಧ್ಯವಾದಷ್ಟು ಅವರಿಗೆ ಬೆಂಬಲ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಮಾರುಕಟ್ಟೆಗೆ ಬರುವ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ



ನೋಡಿಕೊಳ್ಳಬೇಕು. ಹಗಲು ರಾತ್ರಿಯನ್ನದೇ ಬೆವರು ಹರಿಸಿ ದುಡಿಯುವ ರೈತರು ಯಾವುದೇ ಸಮಯದಲ್ಲಿ ಬಂದಾಗ ಕೃಷಿ ಉತ್ಪನ್ನ ಮಾರುಕಟ್ಟೆ ಅಧಿಕಾರಿಗಳು ಅವರಿಗೆ ಸ್ಪಂದನೆ ನೀಡಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ಸೂಚಿಸಿದರು

ಹೊಸಪೇಟೆ ಎಪಿಎಂಸಿ ಪ್ರಾಂಗಣದ ಗೇಟ್ ನಂ.3ರಲ್ಲಿ ನಿರ್ಮಿತಿ ಕೇಂದ್ರದಿಂದ ಈಗಾಗಲೇ 2 ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಡ್ರೈನೇಜ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಅದೇ ರೀತಿ ಗೇಟ್ ನಂ.1ರಲ್ಲಿ 1.91 ಕೋಟಿ ರೂ.ವೆಚ್ಚದ ಕಾಮಗಾರಿಗೆ ಇದೀಗ ಚಾಲನೆ ನೀಡಲಾಗಿದೆ. ಸಂಬಂಧಿಸಿದ ಗುತ್ತಿಗೆದಾರರು ಈ ಬಗ್ಗೆ ಕಾಳಜಿ ವಹಿಸಿ ಗುಣಮಟ್ಟದ ಬಗ್ಗೆ ಗಮನ ಹರಿಸಿ ಕಾಮಗಾರಿಯನ್ನು ಕಾಲಮಿತಿಯೊಳಗಡೆ ಪೂರ್ಣ ಗೊಳಿಸಬೇಕು ಎಂದು ಶಾಸಕರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಎಪಿಎಂಸಿ ಪ್ರಾಂಗಣದಲ್ಲಿ ಶಿಥಲಗೃಹ ನಿರ್ಮಾಣ, ಸಂತೆ ಮಳಿಗೆ ನಿರ್ಮಾಣಕ್ಕೆ ಈಗಾಗಲೇ ಪ್ರಸ್ತಾವನೆ ಸಿದ್ದಪಡಿಸಿ ಸಲ್ಲಿಸಲಾಗಿದೆ. ಹೊಸಪೇಟೆ ಎಂಪಿಎಂಸಿ ಮಾರುಕಟ್ಟೆಯನ್ನು ಜನಸ್ನೇಹಿ ಮಾರುಕಟ್ಟೆಯನ್ನಾಗಿ ಮಾರ್ಪಡಿಸಬೇಕಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಲಾಗುವುದು. ಮಾರುಕಟ್ಟೆಯಲ್ಲಿ ವ್ಯಾಪಾರ ವಾಹೀವಾಟಿಗೆ ಹೆಚ್ಚಿನ ಅನುಕೂಲವಾಗುವ ನಿಟ್ಟಿನಲ್ಲಿ ಯೋಜಿಸಿ ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ ಸೂಕ್ತವಾದ ಅನುದಾನ ಪಡೆದು ಮುಂದಿನ ದಿನಗಳಲ್ಲಿ ಮಾರುಕಟ್ಟೆಯನ್ನು ಸಮಗ್ರ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ನಿಂಗಪ್ಪ ಗುಜ್ಜಲ, ತೋಟಪ್ಪ ಕಡ್ಡಿರಾಂಪುರ, ಬಸವರಾಜ ದೇವರಮನಿ, ಎಪಿಎಂಸಿ ಕಾರ್ಯದರ್ಶಿ ಸಿದ್ದಯ್ಯಸ್ವಾಮಿ, ಸಹಾಯಕ ನಿರ್ವಾಹಕ ಅಭಿಯಂತರರಾದ ಸುದರ್ಶನ, ವರ್ತಕರು, ಪೇಟೆ ಕಾರ್ಯಕರ್ತರು ಮತ್ತು ರೈತರು ಉಪಸ್ಥಿತರಿದ್ದರು.

# ಪೋಷಕರೇ ಮಕ್ಕಳನ್ನು ವಿದ್ಯಾವಂತರನ್ನಾಗಿಸಿ

## ಅಪರ ಹಿರಿಯ ಸಿವಿಲ್ ನ್ಯಾಯಾಧೀಶ ರಮೇಶ್ ಬಾಬು ಬಿ.ಎನ್. ಸಲಹೆ

**ಹಂಪಿ ಟೈಮ್ಸ್ ಹೊಸಪೇಟೆ**

ಉತ್ತಮವಾದ ಸಮಾಜ ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಮಾಜದ ಮುಖ್ಯ ಭಾಗವಾಗಿರುವ ಮಕ್ಕಳಿಗು ಸಹ ಕಾನೂನಿನ ಅರಿವು ಮೂಡಿಸುವುದರಿಂದ ಒಳ್ಳೆಯ ಸಮಾಜ ರೂಪಿಸುವಲ್ಲಿ ಎಲ್ಲರೂ ಸೇರಿ ದಿಟ್ಟ ಹೆಜ್ಜೆ ಇಟ್ಟಂತಾಗುತ್ತದೆ ಎಂದು ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್.ಅವರು ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 8ರಂದು ನಗರದ ವಾಸವಿ ಪ್ರೌಢಶಾಲೆಯಲ್ಲಿ ನಡೆದ ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ-2012ರ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯವಾಗಿ ಮಕ್ಕಳಿಗೆ ಬಾಲ್ಯ ವಿವಾಹ ನಿಷೇಧ, ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆಗಳ ಅರಿವಿರಬೇಕು. 18



ವರ್ಷದ ಒಳಗಿನ ಪ್ರತಿ ಮಕ್ಕಳಿಗೆ ಈ ಕಾನೂನುಗಳು ರಕ್ಷಣೆ ನೀಡುವಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಮಕ್ಕಳು ಕಾನೂನುಗಳ ಬಗ್ಗೆ ತಿಳಿದರೆ ಬಾಲ್ಯ ವಿವಾಹ, ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯಗಳನ್ನು ತಡೆಯಬಹುದು ಎಂದರು.

ಪೋಷಕರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದು ಅವರಿಗು ಮತ್ತು ಸಮಾಜಕ್ಕೆ ಅವರಿಂದ ಒಳಿತಾಗಲಿ ಎಂದು. ಕಾಯ್ದೆ ಕಾನೂನುಗಳ ಬಗ್ಗೆ ಅರಿತು ಅಕ್ಕಪಕ್ಕದವರಿಗೆ ತಿಳಿ ಹೇಳುವ ಕಾರ್ಯವಾಗಬೇಕು. ಮಕ್ಕಳು ಕಾನೂನನ್ನು ಅಧ್ಯಯನ ಮಾಡಿ ಪೋಷಕರಿಗೆ ತಿಳಿಸಿದಲ್ಲಿ ಸಂತಷದಿಂದ ಇರುತ್ತಾರೆ ಎದರು.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್ ಪ್ರಾಸ್ತಾವಿಕ ಮಾತನಾಡಿದರು.

ವಾಸವಿ ಪ್ರೌಢಶಾಲೆಯ ಮುಖ್ಯಾಧ್ಯಾಪಕರಾದ ಡಾ.ಯತ್ನಳ್ಳಿ ಮಲ್ಲಯ್ಯ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ., ಆರಕ್ಷಕ ನಿರೀಕ್ಷರಾದ ಜಯಲಕ್ಷ್ಮಿ, ಶಿಶು ಅಭಿವೃದ್ಧಿ ಇಲಾಖೆಯ ಸುಜಾತ, ಕಾನೂನು ಪರಿವೀಕ್ಷಣಾಧಿಕಾರಿಗಳಾದ ಶ್ರೀಕಾಂತ್ ಮತ್ತು ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಕ್ಕಳ ಬೆಳವಣಿಗೆಗೆ ಅಂಗನವಾಡಿ ಕೇಂದ್ರಗಳು ಸುಧಾರಣೆಯಾಗಲಿ

## ನ್ಯಾಯಧೀಶ ರಾಜೇಶ್ ಎನ್.ಹೊಸಮನೆ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**



ಮಕ್ಕಳಿಗೆ ಗುಣಮಟ್ಟದ ಪೌಷ್ಟಿಕಾಂಶಯುಕ್ತ ಆಹಾರ, ಕ್ರಿಯಾಶೀಲ ಚಟುವಟಿಕೆಗಳಿಗೆ ಆದ್ಯತೆ ನೀಡುವುದರ ಜೊತೆಗೆ ಅವರ ಸರ್ವತೋಮುಖ ಬೆಳವಣಿಗೆಗೆ ಜಿಲ್ಲೆಯಲ್ಲಿನ ಅಂಗನವಾಡಿ ಕೇಂದ್ರಗಳು ಸುಧಾರಣೆಯಾಗಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಹೇಳಿದರು.

ನಗರದ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮೂರನೇಯ ಮಹಡಿಯ ಸಭಾಂಗಣದಲ್ಲಿ ಜಿಲ್ಲೆಯಲ್ಲಿನ ಅಂಗನವಾಡಿ ಶಾಲೆಗಳ ನ್ಯೂನ್ಯತೆ ಕುರಿತಾಗಿ ಗುರುವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಟಿಯಲ್ಲಿ ಅವರು ಮಾತನಾಡಿದರು. ಉಚ್ಚ ನ್ಯಾಯಾಲಯದ ಆದೇಶದನ್ವಯ ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಹಾಗೂ ಅಪೌಷ್ಟಿಕತೆ ನಿವಾರಣಾ ರಾಜ್ಯ ಸಲಹಾ ಸಮಿತಿಯ ಅಧ್ಯಕ್ಷರೂ ಆದ ವೇಣುಗೋಪಾಲಗೌಡ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿ ರಚಿಸಲಾಗಿದೆ. ಸಮಿತಿಯ ಮೂಲಕ ಆಯಾ ಜಿಲ್ಲೆಯ ಅಂಗನವಾಡಿ ಕೇಂದ್ರಗಳ ಸ್ಥಿತಿಗತಿಯ ಬಗ್ಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಚರ್ಚಿಸಿ ಅಂಗನವಾಡಿಗಳಿಗೆ ಭೇಟಿ ನೀಡಿ ಅಲ್ಲಿಯ ಸ್ಥಿತಿ ಗತಿಗಳ ಬಗ್ಗೆ ಮಾಹಿತಿ ಕಳುಹಿಸಿಕೊಡುವಂತೆ ಸೂಚಿಸಿದ್ದಾರೆ ಎಂದು ಅವರು ಹೇಳಿದರು.

ಹಾಗಾಗಿ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಅಂಗನವಾಡಿ ಕೇಂದ್ರಗಳಿಗೆ ಒದಗಿಸಿರುವ ಮೂಲ ಸೌಲಭ್ಯ, ಅವುಗಳ ಸ್ಥಿತಿಗತಿ ಕುರಿತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ ಎಂದು ಅವರು ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ 1358 ಮತ್ತು ವಿಜಯನಗರ ಜಿಲ್ಲೆಯಲ್ಲಿ 1590 ಅಂಗನವಾಡಿ ಕೇಂದ್ರಗಳಿದ್ದು, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳನ್ನೊಳಗೊಂಡಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಸಲಹಾ ಸಮಿತಿಯ ಅಧ್ಯಕ್ಷರ ಮೇರೆಗೆ ಈಗಾಗಲೇ ಪ್ರತಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಲವು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ ಎಂದು ತಿಳಿಸಿದರು. ಸ್ವಚ್ಛತೆ ಬಗ್ಗೆ ಗಮನ ಹರಿಸಲು ಅಂಗನವಾಡಿ ಕಾರ್ಯಕರ್ತೆಯರಿಗೆ, ಸಹಾಯಕರಿಗೆ ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ವೈದ್ಯರು ಅಂಗನವಾಡಿಗಳಿಗೆ ನಿಯಮಿತವಾಗಿ ಭೇಟಿ ನೀಡಿ ತಿಂಗಳಿಗೊಮ್ಮೆ ಮಕ್ಕಳ ಆರೋಗ್ಯ ಪರೀಕ್ಷಿಸಬೇಕು. ಸುಧಾರಣೆಗೆ ಕ್ರಮವಹಿಸಿ ಮಕ್ಕಳಿಗೆ ಒಳ್ಳೆಯ ವಾತಾವರಣ, ಶುದ್ಧ ಕುಡಿಯುವ ನೀರು, ಶುಚಿ ರುಚಿಯಾದ ಊಟ ಕಲ್ಪಿಸಿ ಮಕ್ಕಳು ದಿನನಿತ್ಯ ಅಂಗನವಾಡಿಗೆ ಬರುವಂತೆ ವಾತಾವರಣ ಸೃಷ್ಟಿಸಬೇಕು ಎಂದು ಹೇಳಿದರು. ಮಕ್ಕಳ ಹಾಜರಾತಿ ನಿರ್ವಹಿಸಬೇಕು. ಅಂಗನವಾಡಿ ಶಿಕ್ಷಕಿಯರು ಮತ್ತು ಕಾರ್ಯಕರ್ತೆಯರು ಲಭ್ಯವಿಲ್ಲದಿದ್ದಾಗ ಚಲನ-ವಲನ ಪುಸ್ತಕ ವಹಿಯಲ್ಲಿ ನಮೂದಿಸಿರಬೇಕು. ಜಿಲ್ಲೆಯಲ್ಲಿ ಅಪೌಷ್ಟಿಕ ಮಕ್ಕಳು ಕಂಡಿಬಂದಿಲ್ಲ ಎಂದರು. ಅಪೌಷ್ಟಿಕತೆಯನ್ನು ತಡೆಯಲು ಕ್ರಮವಹಿಸಬೇಕು, ಬಡ ಮಕ್ಕಳೇ ಅಂಗನವಾಡಿ ಕೇಂದ್ರಗಳಿಗೆ ಬರುತ್ತಾರೆ. ಆರೋಗ್ಯವಂತ, ಶಿಕ್ಷಣವಂತ ಮಕ್ಕಳನ್ನು ರೂಪಿಸುವಲ್ಲಿ ಮೂಲ ಬುನಾದಿ ಅಂಗನವಾಡಿ ಕೇಂದ್ರಗಳಾಗಿವೆ. ಸರ್ಕಾರದಿಂದ ಬರುವ ಸೌಲಭ್ಯಗಳು ಸದ್ಬಳಕೆಯಾಗಬೇಕು ಎಂದರು. ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.

# ನಾಟಕದ ಕಲಾವಿದರಿಗೆ ಆಹಾರ ಕಿಟ್ ವಿತರಣೆ

## ಕಾ.ನಿ.ಪತ್ರಕರ್ತರ ಅಧ್ಯಕ್ಷ ಉಮಾಪತಿ ಶೆಟ್ಟರ್ ಹೇಳಿಕೆ | ರಂಗಕಲೆ ಜಿವಂತವಾಗಿರಲು ಕಲಾವಿದರು ಉಳಿಯಬೇಕು



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ತಾಲೂಕು ಘಟಕದಿಂದ, ಪಟ್ಟಣದಲ್ಲಿ ಮಂಡಲಗಿರಿಯ ಶ್ರೀಗುರು ಸಿದ್ದಲಿಂಗೇಶ್ವರ ನಾಟ್ಯ ಸಂಘದ ನಾಟಕ ಕಂಪನಿಯ ಕಲಾವಿದರಿಗೆ, ಗುರುವಾರ ಆಹಾರ ಕಿಟ್‌ಗಳು ವಿತರಿಸಲಾಯಿತು.

ಕಾ.ನಿ.ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಉಮಾಪತಿ ಶೆಟ್ಟರ್ ಮಾತನಾಡಿ, ನಾಟಕ ಜೀವಂತ ಕಲೆಯಾಗಿದ್ದು, ಅವರ ಬದುಕಿನಲ್ಲಿ ಅನೇಕ ಏಳುಬೀಳುಗಳನ್ನು ಅನುಭವಿಸಿರುತ್ತಾರೆ. ಆ ಜೀವಂತ ಕಲೆ ಎನ್ನುವುದು ಉಳಿಯಬೇಕು. ಇತ್ತೀಚಿಗೆ ರಂಗಭೂಮಿ ಕಲೆ ಎನ್ನುವುದು ನಶಿಸುತ್ತಿದೆ ಎನ್ನುವಾಗ ಇನ್ನೂ ಇಂತಹ ಕಂಪನಿಗಳು, ಕಲಾವಿದರನ್ನು ಹಾಗು ಅವರ ಕುಟುಂಬಗಳನ್ನು ನಿರ್ವಹಿಸುತ್ತಿದ್ದಾರೆ. ರಂಗಕಲೆ ಉಳಿಯಬೇಕು, ಕಲಾವಿದರು ಉಳಿಯಬೇಕು ಎನ್ನುವ ಸದುದ್ದೇಶದಿಂದ ನಮ್ಮ ಸಂಘದಿಂದ ಒಂದು ಚಿಕ್ಕ ಅಳಿಲು ಸೇವೆ ಆಹಾರ ಕಿಟ್‌ಗಳನ್ನು ವಿತರಿಸಲಾಗುತ್ತಿದೆ ಎಂದರು.

ನಿರ್ದೇಶಕ ಶರತ್ ಕುಂಬ್ಳೆ ಮಾತನಾಡಿ, ಕಲಾವಿದರ ಬದುಕು ಹಸನಾಗಲಿ ಎಂದು ಮನ ಪೂರ್ವಕ ಹಾರೈಸಿ, ಅವರಿಂದ ಸುಮಾರು 10ದಿನಗಳಿಗಾಗುವಷ್ಟು ಅಕ್ಕಿ, ಎಣ್ಣೆ, ಬೇಳೆ, ಬೆಲ್ಲ, ಸಕ್ಕರೆ, ಟೀಪುಡಿ ಮತ್ತು ತರಕಾರಿಗಳನ್ನು ನೀಡಿದ್ದು ಸಂತೋಷ ತಂದಿದೆ. ಅಲ್ಲದೆ, ಕಂಪನಿಯಲ್ಲಿ ಕೆಲಸಮಾಡುವ ಎಲ್ಲಾ ಕಾರ್ಮಿಕರ ಒದೊತ್ತು ಊಟದಿಂದ ಹೊಟ್ಟೆ ತುಂಬುತ್ತಿದೆಯಲ್ಲ. ಪತ್ರಕರ್ತರ ಸಂಘದ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದರು.

ಸಂಘದ ಜಿಲ್ಲಾಧ್ಯಕ್ಷ ಬುಡ್ಡಿ ಬಸವರಾಜ್, ತಾಲೂಕು ಕಾರ್ಯದರ್ಶಿ ಭೀಮರಾಜ್, ಖಜಾಂಚಿ ರಾಜಸಾಬ್, ಸದಸ್ಯರಾದ ಜೆ.ನಾಗರಾಜ್, ಪಟ್ಟಣ ಶೆಟ್ಟಿ ಮಂಜುನಾಥ, ಸಿ.ಶಿವಾನಂದ, ಮಜ್ಗಿ ವೀರೇಶ್, ಅಕ್ಕಂಡಿ ಬಸವರಾಜ್, ಬಿ.ಕೆ.ಬಸವರಾಜ್ ಹಾಗೂ ವಿಶ್ವನಾಥ ಬಾವಿಕಟ್ಟಿ ಮತ್ತು ನಾಟಕ ಕಂಪನಿಯ ಪಂಚಾಕ್ಷರಿ ಹೂಗಾರ ಸೇರಿದಂತೆ ಕಲಾವಿದರು ಇದ್ದರು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ। ಸಂವತ್ಸರ: ಕ್ರೋಧಿ

**09–08–2024 – ಶುಕ್ರವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ಸಿದ್ಧಿ |
| ಕರಣ | : ಭವ |
| ಸೂರ್ಯೋದಯ | : 06:02:07 |
| ಸೂರ್ಯಾಸ್ತ | : 19:02:21 |
| ರಾಹು | : 10:55–12:32 |
| ಯಮಘಂಡ | : 15:47–17:25 |
| ಗುಳಿಕ | : 07:40–09:17 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 08–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.45 ಅಡಿ |
| ಒಳ ಹರಿವು | 57819 ಕ್ಯುಸೆಕ್ |
| ಹೊರ ಹರಿವು | 59839 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 103.580 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1627.86 ಅಡಿ |
| ಒಳ ಹರಿವು | 17464 ಕ್ಯುಸೆಕ್ |
| ಹೊರ ಹರಿವು | 8892 ಕ್ಯುಸೆಕ್ |
| ಸಾಮರ್ಥ್ಯ | 86.239 ಟಿಎಂಸಿ |

# ಶುಚಿ ರುಚಿಗೆ ಕೈಲಾಶ್ ಪರ್ಬತ್

## ನಗರಸಭೆ ಸದಸ್ಯ ರಮೇಶ ಗುಪ್ತ ಅಭಿಮತ। ನಗರದಲ್ಲಿ ಅಂತರಾಷ್ಟ್ರೀಯ ಹೋಟೆಲ್ ಶುದ್ಧ ಸಸ್ಯಹಾರ ಚಾಟ್ಸ್, ಡೈನಿಂಗ್। ಬೆಳಿಗ್ಗೆ 11 ರಿಂದ ರಾತ್ರಿ 11ರವರೆಗೆ ಸರ್ವೀಸ್

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಕೇಂದ್ರವಾದ ಹೊಸಪೇಟೆಯಲ್ಲಿ ಪ್ರವಾಸಿಗರಿಗೆ ಸೇರಿದಂತೆ ಈಭಾಗದ ಜನರಿಗೆ ಶುಚಿ ಮತ್ತು ರುಚಿಯಾದ ಉತ್ತಮ ಗುಣಮಟ್ಟದ ಸಸ್ಯಹಾರಿ ಆಹಾರ ಒದಗಿಸಲು ಕೈಲಾಶ್ ಪರ್ಬತ್ ಬ್ರಾಂಡೆಡ್ ಹೋಟೆಲ್ ತೆರೆದಿರುವುದು ಹೊಸಪೇಟೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ನಗರಸಭೆ ಸದಸ್ಯ ರಮೇಶ ಗುಪ್ತಾ ಅಭಿಪ್ರಾಯಪಟ್ಟರು.

ನಗರದ ಟಯೋಟಾ ಶೋರೂಂ ಹತ್ತಿರ ಶ್ರೀಸಾಯಿಬಾಬ ರಸ್ತೆಯ ಪಕ್ಕದಲ್ಲಿ ಬೃಹತ್ ಇಂಟರ್‌ನ್ಯಾಷನಲ್ ಬ್ರಾಂಡೆಡ್ ಕೈಲಾಶ್ ಪರ್ಬತ್ ಹೋಟೆಲ್‌ನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು. ಹೊಸಪೇಟೆ ನಗರಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ವಿಜಯನಗರ ಜಿಲ್ಲೆ ವಿಶ್ವಪಾರಂಪರಿಕ ತಾಣ ವಿಶ್ವಪ್ರಸಿದ್ಧ ಹಂಪಿಯನ್ನು ಒಳಗೊಂಡಿದೆ. ನಗರದ ಮೂಲಕ ನಿತ್ಯ ಹಾದು ಹೋಗುವ ಸಾವಿರಾರು ಪ್ರವಾಸಿಗರು, ಉದ್ಯಮಿಗಳನ್ನು ಆಕರ್ಷಿಸಲಿದೆ. ಅಂತರಾಷ್ಟ್ರೀಯ ಬ್ರಾಂಡೆಡ್ ಹೋಟೆಲ್‌ಗಳು ವಿಜಯನಗರಕ್ಕೆ ಬಂದವರಿಗೆ ಉತ್ತಮ ಪರಿಶುದ್ಧ ಆಹಾರ ದೊರೆಯಲಿದೆ. ಸಿಂಗಾಪುರಕ್ಕೆ ಹೋದಾಗ ಅಲ್ಲಿಯೂ ಕೈಲಾಶ್ ಪರ್ಬತ್ ಹೋಟೆಲ್‌ನಲ್ಲಿ



ಊಟ ಮಾಡಿದ್ದೇನೆ. ರುಚಿಕರ ಆಹಾರ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡುವ ಮೂಲಕ ಗ್ರಾಹಕರನ್ನು ಸೆಳೆದಿಟ್ಟುಕೊಂಡಿದೆ. ಉದ್ಯಮಿ ಎಸ್.ಗೋವರ್ಧನ್ ಮತ್ತು ಕೆ.ರವಿಶಂಕರ್ ನೇತೃತ್ವದಲ್ಲಿ ಶುಭಾರಂಭಗೊಂಡಿರುವ ಹೋಟೆಲ್ ಗ್ರಾಹಕರಿಗೆ ಉತ್ತಮ ಸೇವೆ ನೀಡಲಿ ಎಂದು ಶುಭಹಾರೈಸಿ, ಹೊಸಪೇಟೆ ನಗರದಲ್ಲಿ ಅಂತರಾಷ್ಟ್ರೀಯ ಹೋಟೆಲ್ ತಲೆ ಎತ್ತಿರುವುದು ನಗರದ ಅಭಿವೃದ್ಧಿಯ ಸಂಕೇತ ಎಂದರು.

ಗ್ರಾಹಕರ ಒತ್ತಾಸೆಯಂತೆ ಉತ್ತಮ ಆಹಾರ ಒದಗಿಸುವು ಉದ್ದೇಶದಿಂದ ಹೊಸಪೇಟೆಯಲಿ ಕೈಲಾಶ್ ಪರ್ಬತ್ ಹೋಟೆಲ್ ಆರಂಭಿಸಲಾಗಿದೆ. ಬೆಳಿಗ್ಗೆ 11 ರಿಂದ ರಾತ್ರಿ 11ರವರೆಗೆ ವರ್ಷದ 365 ದಿನ ಸೇವೆ ಇರಲಿದೆ. ಮುಂಬೈಚಾಟ್ಸ್, ನಾರ್ಥ್ ಇಂಡಿಯನ್ ಡಿಶಸ್, ಇಟಲಿಯನ್ ಫುಡ್, ಡೆಸರ್ಟ್ಸ್, ಬೇವರೇಜಸ್, ಕಾಂಟಿನೆಂಟಲ್ ಫುಡ್, ತರತರಹದ ಇತರ ರುಚಿಕರ ಪರಿಶುದ್ಧ ಸಸ್ಯಹಾರ ಆಹಾರ ಸಿದ್ಧಪಡಿಸಿ ನೀಡಲಾಗುತ್ತದೆ. 1951 ರಲ್ಲಿ ಸ್ಥಾಪನೆಯಾದ ಕೈಲಾಶ್ ಪರ್ಬತ್ ಹೋಟೆಲ್ ಬೆಂಗಳೂರು, ಚಿಕ್ಕಮಂಗಳೂರು, ಕೂರ್ಗು ಸೇರಿದಂತೆ ದೇಶದ ನಾನಾಕಡೆ ಮತ್ತು ಸಿಂಗಾಪುರ, ಹಾಂಗ್‌ಕಾಂಗ್, ಯುಎಸ್‌ಎ, ಕೆನಡಾ, ಕತಾರ್, ಸೌದಿ ಅರೇಬಿಯಾ, ನೇದರ್ ಲ್ಯಾಂಡ್, ಸ್ವಿಜರ್‌ಲ್ಯಾಂಡ್, ಜರ್ಮನಿಯಲ್ಲೂ ಉತ್ತಮ ಸೇವೆ ನೀಡುತ್ತಿವೆ ಎಂದು ಹೋಟೆಲ್ ಮಾಲೀಕರಾದ ಎಸ್.ಗೋವರ್ಧನ ಮತ್ತು ಕೆ.ರವಿಶಂಕರ ತಿಳಿಸಿದರು.

ಯುವ ಮುಖಂಡ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಸಂದೀಪ್‌ಸಿಂಗ್, ನಗರಸಭೆ ಸದಸ್ಯ ತಾರಿಹಳ್ಳಿ ಜಂಬುನಾಥ, ರೂಪೇಶಕುಮಾರ್, ಇಂಜಿನೀಯರ್ ಶ್ರೀಪಾದ, ಎಚ್.ವಿ.ಶರಣುಸ್ವಾಮಿ ಸೇರಿದಂತೆ ಅನೇಕರು ಇದ್ದರು.

# ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ ಧರ್ಮಸ್ಥಳ ಸಂಘದ ಸದಸ್ಯರಿಂದ ಸ್ವಚ್ಛತೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ (ರಿ ) ಕೊಟ್ಟೂರು ಯೋಜನಾ ವ್ಯಾಪ್ತಿಯ ತಾಲೂಕಿನ ಬೆವೂರು ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸ ಮತ್ತು ನಾಗರ ಪಂಚಮಿ ಹಬ್ಬದ ಪ್ರಯುಕ್ತ, ಯೋಜನೆಯ ಶ್ರದ್ಧಾ ಕೇಂದ್ರ ಕಾರ್ಯಕ್ರಮದಡಿ ಗುರುವಾರ ಸಂಘದ ಸದಸ್ಯರು ಸ್ವಚ್ಛತೆ ಕಾರ್ಯ ಕೈಗೊಂಡರು.

ಈ ವೇಳೆ ದೇವಸ್ಥಾನದ ಅರ್ಚರಾದ ವೀರಭದ್ರಪ್ಪ ಗ್ರಾಮ ಪಂಚಾಯತ ಸದಸ್ಯರಾದ ಹೆಚ್. ಕೊಟ್ರೇಶ್ ಮತ್ತು ಬಿ ಸಿ ಚೆನ್ನಪ್ಪ ಊರಿನ ಮುಖಂಡರು ರುದ್ರಪ್ಪ, ಬಿ ಪಿ ಭದ್ರಗೌಡ ಮತ್ತು ಚೆನ್ನಬಸಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವಚ್ಛತೆ ವೇಳೆ ವಲಯದ ಮೇಲ್ವಿಚಾರಕರಾದ ಶ್ರೀಮತಿ ಸಾವಿತ್ರಿ, ಸೇವಾಪ್ರತಿನಿಧಿ ವಿರೇಶ್ ಮತ್ತು ಸಂಘದ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

# ರಾಜ್ಯ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅಕ್ಟೋಬರ್ 01 ರಂದು ನಡೆಯಲಿರುವ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ನಾಗರಿಕರು ಹಾಗೂ ಸ್ವಯಂಸೇವಾ ಸಂಸ್ಥೆಗೆ ನೀಡುವ ರಾಜ್ಯ ಪ್ರಶಸ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವಿಧ ಕ್ಷೇತ್ರದಲ್ಲಿ (ಶಿಕ್ಷಣ ಕ್ಷೇತ್ರ, ಸಾಹಿತ್ಯ ಕ್ಷೇತ್ರ, ಕಲೆ, ಕಾನೂನು, ಪ್ರತಿಭೆ, ಕ್ರೀಡೆ ಮತ್ತು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸಮಾಜ ಸೇವೆ) ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ 06 ವೈಯಕ್ತಿಕ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ಸಂಸ್ಥೆಗೆ ಪ್ರಶಸ್ತಿ ಸೇರಿ ಒಟ್ಟು 07 ಪ್ರಶಸ್ತಿಗಳನ್ನು ನೀಡಲಾಗುವುದು.

ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ವಿಜಯನಗರ ತಾಲ್ಲೂಕು ಪಂಚಾಯತಿ ಆವರಣ, ಸಂಡೂರು ರಸ್ತೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಗೆ ನೇರವಾಗಿ ಆಗಸ್ಟ್ 31 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.dwdsc.karnataka.gov.in ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಗಸ್ಟ್ 13ರಂದು ಮಹಿಳೆಯರಿಗೆ ಉದ್ಯೋಗಕ್ಕಾಗಿ ನೇರ ಸಂದರ್ಶನ

■ **ಹಂಪಿ ಟೈಮ್ಸ್ ಕೊಪ್ಪಳ**

ಮಹಿಳೆಯರಿಗೆ ಉದ್ಯೋಗಕ್ಕಾಗಿ ನೇರ ಸಂದರ್ಶನವನ್ನು ಆಗಸ್ಟ್ 13ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30ರ ವರೆಗೆ ಕೊಪ್ಪಳದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಎಸ್.ಎಸ್.ಎಲ್.ಸಿ, ಪಿಯುಸಿ, ಡಿಪ್ಲೋಮಾ, ಮತ್ತು ಪದವಿಧರ ಮಹಿಳಾ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ ಉಚಿತ ಪ್ರವೇಶವಿರುತ್ತದೆ.

ಭಾಗವಹಿಸುವ ಅರ್ಹ ಮಹಿಳಾ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ್ ಕಾರ್ಡಿನ ಪ್ರತಿ, ಬಯೋಡಾಟಾ (ರೆಜುಮ್) ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಈ ನೇರ ಸಂದರ್ಶನದನಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿಜಿಲ್ಲಾಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಅಥವಾ ದೂ.ಸಂ: 08539–220859, ಮೊಸಂ: 6361143422 ಹಾಗೂ 8431525339 ಮೂಲಕ ಸಂಪರ್ಕಿಸಿ.

# ದೈಹಿಕ ಬೆಳವಣಿಗೆಗೆ ಯೋಗ, ವ್ಯಾಯಾಮ, ಧ್ಯಾನ, ಕ್ರೀಡೆ ಅವಶ್ಯಕ

## ಪ್ರಾಂಶುಪಾಲ ಡಾಕ್ಟರ್ ಎಂ ರವಿಕುಮಾರ್ ಅಭಿಮತ। ವಾರ್ಷಿಕ ಕ್ರೀಡಾಕೂಟ

■ **ಹಂಪಿ ಟೈಮ್ಸ್ ಕೊಟ್ಟೂರು**

ಮಾನವನಿಗೆ ದೈಹಿಕ ಬೆಳವಣಿಗೆಗೆ ಯೋಗ ವ್ಯಾಯಾಮ ಧ್ಯಾನ ಮತ್ತು ಕ್ರೀಡೆಗಳು ಅತ್ಯಂತ ಅವಶ್ಯಕ ಈ ಚಟುವಟಿಕೆಗಳಿಂದ ಸದೃಢ ದೇಹ ನಿರ್ಮಾಣವಾಗುತ್ತೆ ಜತೆಗೆ ಸದೃಢ ದೇಹದಲ್ಲಿ ಸದೃಢ ಮನಸ್ಸು ಕಾಣಬಹುದು ಎಂದು ಪದವಿ ಕಾಲೇಜಿನ ಪ್ರಾಂಶುಪಾಲರು ಡಾಕ್ಟರ್ ಎಂ ರವಿಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಕೊಟ್ಟೂರೇಶ್ವರ ಮಹಾ ವಿದ್ಯಾಲಯದಲ್ಲಿ ದೈಹಿಕ ಶಿಕ್ಷಣ ವಿಭಾಗ ಐ.ಕ್ಯು.ಎ.ಸಿ, ಎನ್. ಸಿ .ಸಿ, ಹಾಗೂ ಎನ್ ಎಸ್.ಎಸ್. ರಿಸರ್ಚ್ ಅಂಡ್ ಡೆವಲಪ್ಮೆಂಟ್ ಸಂಯೋಗದೊಂದಿಗೆ ಏರ್ಪಡಿಸಿದ್ದ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ತರುವಾಯ ಮಾತನಾಡಿದರು.

ಕೊಟ್ರೇಶ್ ಎಚ್ ದೈಹಿಕ ನಿರ್ದೇಶಕರು ಇದೇ ಕಾಲೇಜಿನ ವಿದ್ಯಾರ್ಥಿಯಾಗಿ, ವಿಶ್ವವಿದ್ಯಾಲಯ ಮಟ್ಟದಲ್ಲಿ ತಾನು ಸಾಧನೆಯನ್ನು ಮಾಡಲು ದೈಹಿಕ ನಿರ್ದೇಶಕರಾಗಿ ದ್ದಂತಹ ಮಹೇಶ್ವರ ಮೂರ್ತಿ ಕಾರಣರು ಎಂದು ಅವರನ್ನು ಸ್ಮರಿಸಿ ಈ ಕಾಲೇಜು ಯಾವಾಗಲೂ ಕ್ರೀಡಾಪಟುಗಳಿಗೆ ಪ್ರೋತ್ಸಾಹಿ ಸುವ ನಿಟ್ಟಿನಲ್ಲಿ ಕೆಲಸ



ಮಾಡುತ್ತಿದೆ ಎಂದರು.

ಡಾ. ಪೃಥ್ವಿರಾಜ್ ಸಿ. ಬೆಡ್ಜರಗಿ ಐಕ್ಯೂಎಸಿ ಸಂಯೋಜಕರು ಕ್ರೀಡೆಯ ಮಹತ್ವದ ಬಗ್ಗೆ ವಿವರಿಸಿ ಮೈಲಾರಲಿಂಗ ಮಾತನಾಡಿದರು, ದೈಹಿಕ ನಿರ್ದೇಶಕ ರಾಗಿರುವಂತ ಡಾಕ್ಟರ್ ಶಿವಕುಮಾರ್ ವಾರ್ಷಿಕ ಕ್ರೀಡಾ ವರದಿಯನ್ನು ವಾಚನ ಮಾಡಿದರು.

ಕಾರ್ಯಕ್ರಮ ಪ್ರಾರಂಭದಲ್ಲಿ ಕ್ರೀಡಾ ಜ್ಯೋತಿ ಬೆಳಗಿಸುವಾಗವ ಕೊಟ್ರೇಶ್ ಎಚ್ ದೈಹಿಕ ನಿರ್ದೇಶಕರು, ಮೈಲಾರಲಿಂಗ ಹಳೆ ಕಾಲೇಜಿನ ವಿದ್ಯಾರ್ಥಿ, ಜಿಮ್ ತರಬೇತುದಾರರು ಕೊಟ್ಟೂರು. ಪ್ರಾಂಶುಪಾಲರು ಡಾಕ್ಟರ್ ಎಂ ರವಿಕುಮಾರ್ ಎಲ್ಲಾ ಬೋಧಕರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು ಪ್ರಶಾಂತ್ ಕುಮಾರ್ ಎಂ ಹೆಚ್, ಡಾ. ಜೆ ಬಿ ಸಿದ್ದನಗೌಡ ಸಿ.ಬಸವರಾಜ್ ಡಾ.ಚೇತನ್ ಚೌಹಾನ್ ಇದ್ದರು. ಪ್ರಾರ್ಥನೆ ವಿದ್ಯಾರ್ಥಿನಿ ವಿಜಯಲಕ್ಷ್ಮಿ, ಸ್ವಾಗತ ಪ್ರೊ.ರಾಧಾ ಸ್ವಾಮಿ ಕೆಪಿ. ವಂದನೆ ಪೃಥ್ವಿರಾಜ್. ನಿರೂಪಣೆ ಉಪನ್ಯಾಸಕಿ ಪ್ರತಿಭಾ ಕೆ ಸಿ ನೆರವೇರಿಸಿದರು.


# ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಿ: ಡಿಸಿ ಕರೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಎಲ್ಲಾ ರೈತರು ತಪ್ಪದೇ ತಮ್ಮ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ಪ್ರಸ್ತಕ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ (ವಿಮಾ) ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲಿ ಕೃಷಿ ಚಟುವಟಿಕೆಗಳು ಬರದಿಂದ ಸಾಗುತ್ತಿವೆ. ಎಲ್ಲಾ ಅಧಿಕಾರಿಗಳು ಜಿಲ್ಲೆಯಲ್ಲಿ ಬೆಳೆ ವಿಮೆ ಕುರಿತು ವ್ಯಾಪಕ ಪ್ರಚಾರ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆ ವಿಮೆ ಯೋಜನೆಯಡಿ



ರೈತರನ್ನು ನೋಂದಾಯಿಸಿಕೊಳ್ಳಿ ಎಂದು ಸೂಚಿಸಿದರು. ಜಿಲ್ಲೆಯ ಎಲ್ಲಾ ರೈತರು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡ ಲಾದ ವಿವಿಧ ಬೆಳೆಗಳಿಗೆ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಬೆಳೆ ವಿಮೆಗೆ ನೋಂದಾಯಿಸಲು ಎಲ್ಲಾ ರೈತರು ಅದರಲ್ಲಿ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಅರ್ಹರಿದ್ದು, ತಮ್ಮ ಹತ್ತಿರದ ಸ್ಥಳೀಯ ಬ್ಯಾಂಕ್, ಸಾರ್ವಜನಿಕ ಸೇವಾ ಕೇಂದ್ರಗಳು ಹಾಗೂ ಗ್ರಾಮ ಪಂಚಾಯಿತಿಯಲ್ಲಿ ಹೊಸದಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮಒನ್ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆ ಮಾಡಿಸಬಹುದು ಎಂದರು.

ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ಮಾತನಾಡಿ, ನೀರಾವರಿ ಮತ್ತು ಮಳೆಯಾಶ್ರಿತ ಬೆಳೆಗಳಾದ ಭತ್ತ, ರಾಗಿ, ನವಣೆ, ಹುರುಳಿ, ನೆಲಗಡಲೆ, ಸಜ್ಜೆ ಬೆಳೆಗಳಿಗೆ ವಿಮೆಗೆ ನೋಂದಾಯಿಸಲು ಆ.16 ಕೊನೆಯ ದಿನವಾಗಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಕೃಷಿ ಉಪನಿರ್ದೇಶಕ ಕೆಂಗೇಗೌಡ, ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಸೇರಿದಂತೆ ತಾಲ್ಲೂಕು ಮಟ್ಟದ ಕೃಷಿ ಮತ್ತು ತೋಟಗಾರಿಕೆ ಅಧಿಕಾರಿಗಳು, ಇನ್ನಿತರರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SSLC Science Hampi Times Margadarshi - 2024-25

ಮುಂದುವರೆದ ಭಾಗ

8. ನೆಫ್ರಾನ್‌ಗಳಲ್ಲಿ ಮೂತ್ರ ಉತ್ಪತ್ತಿಯಾಗುವ ಪ್ರಕ್ರಿಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಉತ್ತರ : ಗ್ಲಾಮೆರುಲಾರ್ ಸೋಸುವಿಕೆ : ರಕ್ತದ ಒತ್ತಡದಿಂದ ಗ್ಲಾಮರುಲಸ್‌ನಲ್ಲಿ ರಕ್ತವು ಸೋಸಲ್ಪಡುತ್ತದೆ. ಇದರಲ್ಲಿ ತ್ಯಾಜ್ಯ ಘಟಕಗಳ ಜೊತೆಗೆ ಗ್ಲುಕೋಸ್, ಅಮೈನೋ ಆಮ್ಲಗಳು ಹಾಗೂ ನೀರಿನಂತಹ ಉಪಯುಕ್ತ ಪದಾರ್ಥಗಳು ಇರುತ್ತವೆ.

ವ್ಯತ್ಯಸ್ಥ ಮರುಹೀರಿಕೆ : ಶೋಧಿಸಲ್ಪಟ್ಟ ದ್ರವದಲ್ಲಿರುವ ಉಪಯುಕ್ತ ಪದಾರ್ಥಗಳು ನುಲಿಕೆ ನಾಳದಲ್ಲಿ ಮರುಹೀರಲ್ಪಡುತ್ತವೆ.

ನಳಿಕಾ ಸ್ರವಿಕೆ : ನುಲಿಕೆ ನಾಳದಿಂದ ಸಂಗ್ರಾಹಕ ನಾಳ ಸೇರುವ ದ್ರವವು ಯೂರಿಯಾ, ಯೂರಿಕ್ ಆಮ್ಲಯುಕ್ತ ತ್ಯಾಜ್ಯಗಳನ್ನು ಒಳಗೊಂಡಿದ್ದು ಮೂತ್ರ ಎನಿಸಿಕೊಳ್ಳುತ್ತದೆ. ಮೂತ್ರದ ಸಾರತೆಯನ್ನು ಕಡಿಮೆ ಮಾಡಲು ಸಂಗ್ರಾಕ ನಾಳವು ಮೂತ್ರಕ್ಕೆ ನೀರನ್ನು ಸೇರಿಸುತ್ತದೆ.

9. ಸಸ್ಯಗಳಲ್ಲಿ, ವಸ್ತುಗಳ ಸಾಗಾಣಿಕೆಯಲ್ಲಿ ಕ್ಸೈಲಂ ಮತ್ತು ಫ್ಲೋಯಂ ಅಂಗಾಂಶಗಳ ಪಾತ್ರವನ್ನು ವಿವರಿಸಿ.


ಕ್ಸೈಲಂ: ಜಲವಾಹಕ ಅಂಗಾಂಶ

- ಬೇರುಗಳಿಂದ ಹೀರಲ್ಪಟ್ಟ ನೀರು ಮತ್ತು ಲವಣಾಂಶಗಳನ್ನು ಸಸ್ಯದ ಎಲ್ಲಾ ಭಾಗಗಳಿಗೆ ಸಾಗಿಸುತ್ತದೆ.
- ಬಾಷ್ಪವಿಸರ್ಜನೆ (ಪತ್ರರಂಧ್ರಗಳಿಂದ ನೀರು ನಷ್ಟವಾಗುವಿಕೆ)ಯು ಚೋಷಣವನ್ನು ಉಂಟುಮಾಡುತ್ತದೆ. ಇದು ನೀರು ಮತ್ತು ಅದರಲ್ಲಿ ಕರಗಿರುವ ಲವಣಗಳನ್ನು ನಿರಂತರವಾಗಿ ಮೇಲಕ್ಕೆ ತಳ್ಳುತ್ತಿರುತ್ತದೆ.


ಫ್ಲೋಯಂ : ಆಹಾರವಾಹಕ ಅಂಗಾಂಶ

- ದ್ಯುತಿಸಂಶ್ಲೇಷಣೆಯ ಉತ್ಪನ್ನಗಳು, ಅಮೈನೋ ಆಮ್ಲಗಳು ಮತ್ತು ಇತರ ವಸ್ತುಗಳನ್ನು ಫ್ಲೋಯಂ ಅಂಗಾಂಶವು ಎಲೆಗಳಿಂದ ಬೇರುಗಳು, ಹಣ್ಣುಗಳು ಮತ್ತು ಬೀಜಗಳಂತಹ ಸಂಗ್ರಹಣಾ ಅಂಗಗಳಿಗೆ ಮತ್ತು ಬೆಳೆಯುತ್ತಿರುವ ಅಂಗಗಳಿಗೆ ಪೂರೈಸುತ್ತದೆ.
- ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ಮೇಲ್ಮುಖ ಮತ್ತು ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ.
- ನೀರು ಫ್ಲೋಯಂ ಅಂಗಾಂಶದೊಂದಿಗೆ ಪ್ರವೇಶಿಸಲು ಹಾಗೂ ಇತರ ವಸ್ತುಗಳು ಫ್ಲೋಯಂನಿಂದ ಬೇರೆ ಅಂಗಾಂಶಗಳಿಗೆ ಪ್ರವೇಶಿಸಲು ಅಭಿಸರಣ ಒತ್ತಡವು ಸಹಾಯಮಾಡುತ್ತದೆ.


10. ಈ ಕೆಳಗಿನ ಚಿತ್ರಗಳನ್ನು ಬಿಡಿಸಿ ಭಗಗಳನ್ನು ಗುರುತಿಸುವ ಅಭ್ಯಾಸ ಮಾಡಿ. (Apr-2019, Apr-2020)





ಮಾನವನ ವಿಸರ್ಜನಾಂಗವ್ಯೂಹ




ತೆರೆದ ಪತ್ರರಂಧ್ರದ ಚಿತ್ರ




ಮಾನವನ ಹೃದಯದ ನೀಳಛೇದ ನೋಟ




ನೆಫ್ರಾನ್‌ನ ರಚನೆಯ ಚಿತ್ರ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಶಿವತನಯ ಎಸ್**.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055